# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿಬಿಎಂಪಿ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ನಿಗಧಿಪಡಿಸಿರುವ ರೂ.75.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾಡಿರುವ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022.
3. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (5).
4. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಬಿಬಿಎಂಪಿ ಮುಆ(ರ.ಮೂ.ಸೌ)/ಪಿಆರ್/07/2021-22, ದಿನಾಂಕ: 08-04-2022.

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಮೂಲಕ ಮುಖ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ದಿನಾಂಕ: 25-02-2022 (5) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಕ್ಕೆ ರೂ.75.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿ ಆದೇಶಿಸಲಾಗಿರುತ್ತದೆ.

...2/-

ಮೇಲೆ ಕ್ರಮ ಸಂಖ್ಯೆ: (4) ರಲ್ಲಿ ಓದಲಾದ ದಿನಾಂಕ: 08-04-2022 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ" ಅಡಿಯಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಕ್ಕೆ ರೂ.75.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್ ವೈ 2021(ಇ), ದಿನಾಂಕ: 25-02-2022(5) ರಂತೆ ಮಂಜೂರು ಮಾಡಲಾಗಿರುತ್ತದೆ.

ಈ ಸಂಬಂಧ ಮಾನ್ಯ ಶಾಸಕರು ರವರು ವಲಯ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ ಹಾಗೂ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರುಗಳು ಒಟ್ಟಾಗಿ ಚರ್ಚಿಸಿ, ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ 2021-22, 2022-23 ಮತ್ತು 2023-24 ರಲ್ಲಿ ಕೈಗೊಳ್ಳಬೇಕಾಗಿರುವ ಪ್ರಥಮ ಆದ್ಯತಾ ಕಾಮಗಾರಿಗಳನ್ನು ಗುರುತಿಸಿರುತ್ತಾರೆ.

ಅದರಂತೆ, ಮಾನ್ಯ ಶಾಸಕರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ರವರ ಚರ್ಚೆಯಂತೆ ವಲಯ ಕಾಮಗಾರಿಗಳಿಗೆ ರೂ.50.00 ಕೋಟಿಗಳನ್ನು ಹಾಗೂ ಬೃಹತ್ ರಸ್ತೆಗಳ ಅಭಿವೃದ್ಧಿ ಮತ್ತು ಉನ್ನತೀಕರಣಕ್ಕಾಗಿ ರೂ.25.00 ಕೋಟಿಗಳನ್ನು, ಹೀಗೆ ಒಟ್ಟು ರೂ.75.00 ಕೋಟಿಗಳಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಪ್ರಥಮ ಆದ್ಯತಾ 27 ಕಾಮಗಾರಿಗಳನ್ನು ಪಟ್ಟಿ ಮಾಡಿ, ಪತ್ರದ ಮುಖೇನ ದೃಢೀಕರಿಸಿರುವುದಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿರುತ್ತಾರೆ. ಆದುದರಿಂದ, ಸದರಿ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡುವಂತೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 206 ಎಂಎನ್‌ವೈ 2022 (ಇ),**
**ಬೆಂಗಳೂರು, ದಿನಾಂಕ: 18-05-2022.**

ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (5) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರಕ್ಕೆ ರೂ.75.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಆದೇಶಿಸಿದ್ದು, ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯಂತೆ, ಸದರಿ ರೂ.75.00 ಕೋಟಿಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

| Sl No | Name of Work | Est Cost (Rs. In Lakhs) |
|---|---|---|
| 1 | Improvements to Roads & Drains at MCECHS Layout 1st Phase & 2nd Phase In Ward No. 05 | 200.00 |

| | | |
|---|---|---|
| 2 | Improvements to Roads & Drains at Sampigehalli & Chokkanahalli Surrounding Area In Ward No. 05 | 200.00 |
| 3 | Improvements to Roads & Drains at Balaji Krupa Layout, Basavalingappanagara & Center Excise Layout Surrounding Area In Ward No 05 | 200.00 |
| 4 | Improvements to Roads & Drains at Bellahalli & Kattigenahalli Surrounding Area In Ward No. 05 | 200.00 |
| 5 | Improvements to Roads & Drains at Kaveri Nagara & Shiradi Sainagara & Surrounding Area In Ward No. 06 | 200.00 |
| 6 | Improvements to Roads & Drains at Hegadenagara Western Side Balance Cross Roads In Ward No. 06 | 200.00 |
| 7 | Improvements to Roads & Drains at Hegadenagara Eastern Side Roads In Ward No. 06 | 200.00 |
| 8 | Improvements to Roads & Drains Of Nethajinagara & Surrounding Areas In Ward No.07 | 150.00 |
| 9 | Improvements to Roads & Drains Of Coffee board Layout In Ward No.07 | 300.00 |
| 10 | Improvements to Roads & Drains From Dasarahalli Main Road To Coffee Board Layout Main Road In Ward No.07 | 150.00 |
| 11 | Improvements to Roads & Drains in Chiranjeevi Layout & Surrounding Area In Ward No. 07 | 200.00 |
| 12 | Improvements to Roads & Drains Of Tata Nagar & Surrounding Areas In Ward No. 08 | 150.00 |
| 13 | Improvements to Roads & Drains Of Sahakaranagara C & D Block & Surrounding Areas In Ward No. 08 | 150.00 |
| 14 | Improvements to Roads & Drains Of Balaji Layout, Bhadrappa Layout & Surrounding Areas In Ward No. 08 | 200.00 |
| 15 | Improvements to Roads, Drains & Footpath at 1st Block, 5th, 6th BEL Layout, 4th, 5th, 6th Block HMT Layout, Narasipura, Defence Layout, NTI Layout Main Road & Cross Roads In Ward No. 09. | 400.00 |
| 16 | Improvements to Roads, Drains & Footpath at Venkataswamappa Layout, IECHS Layout, Basavasamithi, Jnaneshwari Layout, Anjaneyaswamy Layout, APC Layout, Lakeshore Garden, Sapthagiri Layout, Somanna Garden, Main Road & Cross Roads in Ward No. 09 | 250.00 |
| 17 | Improvements to Roads & Drains at Kodigehalli, Virupakshapura, Parwathamma Layout, Bullet Krishnappa Layout, Sir M.V. Layout, Thindlu, An&a Layout, Canara Bank Layout Road & Cross Roads In Ward No. 09 | 250.00 |
| 18 | Improvements to Balance Roads & Drains At Nanjappa Layout, Chamundeshwari Layout, Kalappa Layout, Venkatagiriyappa Layout, Hanuman Layout, Patel Pille Gowda Layout, Blue Moon Garden, Bloom Field Garden, C. Ramaiah Layout & Surrounding Areas In Ward No. 10 | 400.00 |
| 19 | Improvements to Balance Roads & Drains At Kuvempunagara 1st Stage, 2nd Stage, Hosabalunagara, Valmikinagara, Singapura, Singapura Layout, Singapura Garden, Singapura Paradise & Surrounding Areas In Ward No. 11 | 400.00 |

. . .4/-

| | | |
|---|---|---|
| 20 | Improvements to Balance Roads & Drains At Mariyamma Block, Raghuram Layout, Gangamma Gudi, Kalathur Layout & Surrounding Areas In Ward No.11 | 300.00 |
| 21 | Improvements to Balance Roads & Drains At MS Palya, Srinidhi Layout, Balaji Layout, Teachers Layout, Vadaradarajangara, Vinayakanagara, Ganesh Layout & Surrounding Areas In Ward No. 11 | 300.00 |
| 22 | Improvements of Dasarahalli Main Road From Bellary Road At Godrej Appartment To JNC Circle Via Bhuvaneshwari Nagar, Dasarahalli Circle. | 311.50 |
| 23 | Improvements of Drain & Asphalting To Bagalur Main Road From Bellary Road (KIA Road) to BBMP Limits. | 642.30 |
| 24 | Improvements of Mariyappanapalya Road From ORR At Veerannapalya Signal To Dasarahalli Circle At Karagadamma Temple. | 229.00 |
| 25 | Improvements & asphalting to Jakkur double Road From Krishna Sagar Hotel to Thanisandra Main Road Via MCECHS Layout & Shivarama Karanth RUB. | 500.00 |
| 26 | Improvements of Drain & Asphalting to Singapura Road From MS Palya Circle to Gangamma Circle Via Kuvempunagara | 461.20 |
| 27 | Improvements of Drain & Asphalting to Bhadrappa Layout Main Road From ORR to Kodigehalli Ganesha Temple | 356.00 |
| | **Total** | **7500.00** |

**ಷರತ್ತುಗಳು:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಮತ್ತು ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.75.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುವು ಮಾಡಿರುವ ರೂ.75.00 ಕೋಟಿಗಳಿಗೆ ಮೀರಿದ ಯಾವುದೇ ವೆಚ್ಚ ಮತ್ತು ಟೆಂಡರ್ ಪ್ರೀಮಿಯಂಗಾಗಿ ಮಾಡುವ ವೆಚ್ಚವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಟೆಂಡರ್ ಪ್ರೀಮಿಯಂ ಮೊತ್ತವನ್ನು ಅಂದಾಜಿನಲ್ಲಿ ಅನುವು ಮಾಡತಕ್ಕದ್ದಲ್ಲ.

2. ಸದರಿ ಕಾಮಗಾರಿಗಳನ್ನು ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್ ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್.ಎಫ್.ಸಿ 2016, ಬೆಂಗಳೂರು, ದಿನಾಂಕ: 14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾಮಗಾರಿಗಳನ್ನು ವಿಭಜಿಸತಕ್ಕದ್ದಲ್ಲ.

. . .5/-

3. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ / ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತ ಪಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.
4. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಮುಖ್ಯ ಆಯುಕ್ತರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಬಿಬಿಎಂಪಿಯ ಮುಖ್ಯ ಆಯುಕ್ತರು ತಮ್ಮ ಹಂತದಲ್ಲಿ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳಾಗಿ ವಿಂಗಡಿಸಿ ಆದೇಶ ಹೊರಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.
5. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮ ವಹಿಸತಕ್ಕದ್ದು.
6. ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.
8. ಸರ್ಕಾರವು ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಬದಲಾವಣೆ ಮಾಡ ತಕ್ಕದ್ದಲ್ಲ. ಯಾವುದಾದರೂ ಅನುಮೋದಿತ ಕಾಮಗಾರಿಯ ಅಗತ್ಯವಿಲ್ಲವೆಂದು ಆ ನಂತರದಲ್ಲಿ ತಿಳಿದುಬಂದಲ್ಲಿ ಸಂಬಂಧಪಟ್ಟ ಅಂದಾಜು ಮೊತ್ತವನ್ನು ಉಳಿತಾಯವೆಂದು ಪರಿಗಣಿಸತಕ್ಕದ್ದು.
9. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಲಕ್ಷ್ಮೀಸಾಗರ್ ಎನ್.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

18/05

. . .6/-

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.